ಓ.ಎಸ್ ನಂ. 51/2022 ಪಿ.ಡಬ್ಲ್ಯೂ:1

ಸಾಕ್ಷಿಗೆ ಪ್ರಮಾಣ ವಚನವನ್ನು ದಿ:24-03-2026 ರಂದು ಬೋಧಿಸಲಾಯಿತು.

ಪಾಟೀ ಸವಾಲು: 1 ನೇ ಪ್ರತಿವಾದಿ ಪರ ಶ್ರೀ ಎಸ್ ಕೆ ಜಿ ವಕೀಲರಿಂದ:

ನಿಮ್ಮ ಮನೆಯು ಯಾವ ಸರ್ವೆ ನಂಬರ ಗೆ ಬರುತ್ತಿದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಉಂಚಳ್ಳಿ ಗ್ರಾಮಕ್ಕೆ ಸೇರಿದ ಸ.ನಂ. 20/3 ರಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ಸ.ನಂ. 20/3 ನನ್ನ ಯಜಮಾನರ ಹೆಸರಿನಲ್ಲಿರುತ್ತದೆ ಎಂದು ನುಡಿಯುತ್ತಾರೆ. ಸ.ನಂ. 20/3 ದೇವೇಂದ್ರ ಗಣೇಶ ಭಟ್ ಎನ್ನುವವರ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ಅದು ಸಾಮೂಹಿಕ ಆಸ್ತಿ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಈಗ ಸ.ನಂ. 20/3 ರ ಪಹಣಿ ಪತ್ರಿಕೆಯನ್ನು ತೋರಿಸಿ ಅದು ದೇವೇಂದ್ರ ಗಣೇಶ ಭಟ್ ಎನ್ನುವವರ ಹೆಸರಿಗೆ ಇರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

ಉಂಚಳ್ಳಿ ಗ್ರಾಮಕ್ಕೆ ಸೇರಿದ ಸ.ನಂ. 20/4 ರ ಪಹಣಿ ಪತ್ರಿಕೆಯನ್ನು ಸಾಕ್ಷಿಗೆ ತೋರಿಸಿ ಈ ಸ್ವತ್ತು ಸಾಮೂಹಿಕವಾದ ಆಸ್ತಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅದನ್ನು ನೋಡಿ ಸುಳ್ಳು ಎಂದು ನುಡಿಯುತ್ತಾರೆ.

ನಿಮ್ಮ ಯಜಮಾನರು ಜೀವಂತ ಇರುವವರೆಗೂ ಮನೆಗೆ ಸಂಬಂದಿಸಿದಂತೆ ಏನೇನೂ ಪ್ರಕರಣಗಳು ನಡೆದಿರುತ್ತದೆ ಎಂದು ನಿಮಗೆ ಮಾಹಿತಿ ಇರುತ್ತೆದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ಶಾಂತಾರಾಮ ಗಣೇಶ ಭಟ್ ರವರು ನನ್ನ ಗಂಡ ಇರುತ್ತಾರೆ ಎಂದರೆ ಸರಿ. ನನ್ನ ಮನೆಯ ಸಂಖ್ಯೆ 30 ಇ ಇರುತ್ತದೆ.

ನನ್ನ ಯಜಮಾನರು ಅಸಲು ದಾವಾ ನಂ. 27/2017 ರಂತೆ ಇದೇ ದಾವಾಸ್ತಿ ಸಂಬಂದಿಸಿದಂತೆ ಪ್ರತಿವಾದಿಯರ ವಿರುದ್ಧ ದಾವೆಯನ್ನು ಹಾಕಿದ್ದರು ಎಂದರೆ ಸರಿ. ಸದ್ರಿ ದಾವೆಯನ್ನು ನನ್ನ ಗಂಡ ದಿ: 12-03-2022 ರಂದು ವಾಪಸ ತೆಗೆದುಕೊಂಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದೇವೇಂದ್ರ ಗಣೇಶ ಭಟ ರವರು ನನ್ನ ಯಜಮಾನರ ಮೇಲೆ ಹಾಗೂ 1 ನೇ ಪ್ರತಿವಾದಿಯರ ಮೇಲೆ ಅಸಲು ದಾವಾ ನಂ. 108/2012 ರಂತೆ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿನ ಮನೆಯು ಲಕ್ಷ್ಮಣ ಗಣೇಶ ಭಟ ರವರು ಹೆಸರಿನಲ್ಲಿದ್ದು ಸಿದ್ದಾಪುರ ತಾಲೂಕು ಪಂಚಾಯಿತಿರವರು ಆದೇಶ ಮಾಡಿದ್ದರು ಸಹ ಗ್ರಾಮ ಪಂಚಾಯಿತಿರವರು ನನ್ನ ಹೆಸರಿಗೆ ಖಾತೆ ಮಾಡಿಕೊಟ್ಟಿರುವುದಿಲ್ಲ ಎಂದು ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ.

**ಓ.ಎಸ್ ನಂ. 51/2022 ಪಿ.ಡಬ್ಲ್ಯೂ:1**

ಅಸಲು ದಾವಾ ನಂ. 27/2017 ನ್ನು ನನ್ನ ಯಜಮಾನರು ಇದೇ ವಿಚಾರಕ್ಕೆ ಸಂಬಂದಿಸಿದಂತೆ ಇದೇ ದಾವಾ ಸ್ವತ್ತಿಗೆ ಸಂಬಂದಿಸಿದಂತೆ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದ್ರಿ ದಾವೆಯು ವಜಾ ಆದ ನಂತರ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ಆ ದಾವೆ ಎನು ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಮನೆ ನಂ. 30 ಇ ಗೆ ಸಂಬಂದಿಸಿದಂತೆ ಯಾರ ಯಾರ ತಕರಾರು ಇರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ಹಾಗೂ ದೇವೇಂದ್ರ ಗಣೇಶ ಭಟ ರವರ ಹೆಸರಿಗೆ ತಕರಾರು ಇರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಮತ್ತು ದೇವೆಂದ್ರ ಗಣೇಶ ಭಟ ರವರ ನಡುವೆ ಮಾತ್ರ ವಿವಾದ ಇರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮನೆ ನಂಬರ ನೀಡಬೇಕೆಂದು ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

ಪಂಚಾಯಿತಿ ರವರು ಮನೆ ನಂ. 30 ಇ ಎಂದು ನೀಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸದ್ರಿ ದಾಖಲೆಯನ್ನು ನೋಡಿ ಈ ದಾಖಲೆಯನ್ನು ನನಗೆ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ 1 ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**Sd/-**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**